ಓಃಎಸ್ಃನಂ.288/2012

ಡಿ .ಡಬ್ಲ್ಯೂ- 1

**ದಿನಾಂಕಃ 17-04-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

ಮುಂದುವರಿದ **ಪಾಟೀ ಸವಾಲುಃ** ವಾದಿ ಪರ ಶ್ರೀ ಟಿ ಎಲ್ ಪಿ **ವಕೀಲರಿಂದ**

ನನ್ನ ತಂದೆ ಖರೀದಿ ಮಾಡಿರುವ ಸ್ವತ್ತು ಮೂಲತಃ ಪೂಜಾರಿ ಕರಿಯಪ್ಪನವರ ಸ್ವತ್ತಾಗಿರುತ್ತದೆ ಎಂದರೆ ಸರಿ. ಪೂಜಾರಿ ಕರಿಯಪ್ಪನವರ ಕುಟುಂಬದಲ್ಲಿ ಅವರ ಹೆಂಡತಿಯಾದ ಗಂಗಮ್ಮ, ಹೆಣ್ಣುಮಕ್ಕಳಾದ ಲಕ್ಷ್ಮಮ್ಮ, ಯಶೋದ ಎಲ್ಲರೂ ಸೇರಿ ನ್ಯಾಯಾಲಯದಲ್ಲಿ ದಾವೆ ಹೂಡಿ ವಿಭಾಗ ಮಾಡಿಕೊಂಡಿರುವ ವಿಚಾರ ನಿಮಗೆ ತಿಳಿದಿದೆಯೇ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಸರ್ವೆ ನಂ.35/3 ನನ್ನ ತಂದೆ ಖರೀದಿ ಮಾಡಿರುವಂತಹ ಸ್ವತ್ತು ಆಗಿರುತ್ತದೆ. ಸರ್ವೆ ನಂ.35/7 ಲಕ್ಷ್ಮಮ್ಮನವರಿಗೆ ಸೇರಿರುವ ಸ್ವತ್ತು ಆಗಿರುವ ಬಗ್ಗ ನಿಮಗೆ ಗೊತ್ತಿಲ್ಲ ಎಂದರೆ ಸರಿ. ಸರ್ವೆ ನಂ.35/1 ರಲ್ಲಿ ಹಿಸ್ಸೆಯನ್ನು ಯಶೋದಮ್ಮನವರಿಗೆ ನೀಡಿರುತ್ತಾರೆಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಗಂಗಮ್ಮನವರಿಗೆ ಬಂದ ಸ್ವತ್ತಿನ ಬಗ್ಗ ಪರಿಶೀಲನೆ ಮಾಡಿ ಕ್ರಯಕ್ಕೆ ಪಡೆದಿರುತ್ತೇವೆ. ಗಂಗಮ್ಮನವರಿಗೆ ಸರ್ವೆ ನಂ.35/3 ರಲ್ಲಿ 33 ¾ ಗುಂಟೆ ಅವರ ಹೆಸರಿಗೆ ಬಂದಿರುತ್ತದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ.

33 ¾ ಗುಂಟೆ ಜಮೀನು ಹಿಸ್ಸೆ ಆಗಿರುವ ಬಗ್ಗ ನನಗೆ ಗೊತ್ತಿಲ್ಲ. 33 ¾ ಗುಂಟೆಯಲ್ಲಿ ನಮ್ಮ ಸ್ವತ್ತು ಎಲ್ಲಿ ಬರುತ್ತದೆ ಎಂದು ಖರೀದಿ ಮಾಡುವ ಸಮಯದಲ್ಲಿ ಅಳತೆ ಮಾಡಿಸಿ ಸ್ಕೆಚ್ಚನ್ನು ನೀಡಿರುತ್ತಾರೆಂದರೆ ಸರಿ. ಸದರಿ ಸ್ಕೆಚ್ಚನ್ನು ಕಮಿಷನರ್ ರವರು ಅಳತೆ ಮಾಡಿ ನೀಡಿರುವ ವರದಿ ಮೇರೆಗೆ ಮಾಡಿರುತ್ತಾರೆಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಸ್ಕೆಚ್ ಹಾಗೂ ಅಳತೆ ಮಾಡಿರುವ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನಮಗೆ ಯಾವುದೇ ತೊಂದರೆ ಇರುವುದಿಲ್ಲ. ಸ್ಕೆಚ್ ಹಾಗೂ ಅಳತೆ ಮಾಡಿರುವ ದಾಖಲಾತಿಗಳು ಸರ್ವೆ ನಂ.35/3 ರ ಜಮೀನಿಗೆ ಸಂಬಂಧಪಟ್ಟ

ದಾಖಲಾತಿಗಳಾಗಿರುತ್ತದೆ ಎಂದರೆ ಸಾಕ್ಷಿ ಹೌದು ಎಂದು ನುಡಿದಿದ್ದು, ಸಾಕ್ಷಿ ಮುಂದುವರಿದು ಪಹಣಿಯಲ್ಲಿ ಸರ್ವೆ ನಂ.35/1 ಎಂದು ತಪ್ಪಾಗಿ ಆಗಿರುತ್ತದೆ ಎಂದು ನುಡಿದಿರುತ್ತಾರೆ. ಸರ್ವೆ ನಂ.35/3, 35/1 ಆಗಿ ತಪ್ಪಾಗಿ ನಮೂದು ಆಗಿರುತ್ತದೆ ಎಂದು ಯಾವ ಆಧಾರದ ಮೇಲೆ ಹೇಳುತ್ತೀರಾ ಎಂದರೆ ಸಾಕ್ಷಿ ಅದು ತಪ್ಪಾಗಿರುವ ಕಾರಣ ಎಸಿ ನ್ಯಾಯಾಲಯದಲ್ಲಿ ಅರ್ಜಿಯನ್ನು ಸಲ್ಲಿಸಿರುತ್ತೇವೆ ಎಂದು ನುಡಿದಿರುತ್ತಾರೆ. ಸರ್ವೆ ನಂ.35/1 ರ ಬಗ್ಗೆ ನಕ್ಷೆ ಅಥವಾ ಸ್ಕೆಚ್ ನ್ನು ತಯಾರು ಮಾಡಿರುತ್ತಾರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿದಿರುತ್ತಾರೆ. ಸರ್ವೆ ನಂ.35/1 ರ ಮಾಲೀಕರು ಯಾರು ಎಂದು ತಿಳಿದಿದೆಯೇ ಎಂದರೆ ಸಾಕ್ಷಿ ಗಂಗಮ್ಮನವರ ಕುಟುಂಬಸ್ಥರೇ ಆಗಿರುತ್ತಾರೆಂದು ನುಡಿದಿರುತ್ತಾರೆ. ಸರ್ವೆ ನಂ.35/1 ಸ್ವತ್ತು ನಮಗೆ ಸೇರಿದ್ದು ಎಂದು ಯಶೋದಮ್ಮನವರು ನಿಮ್ಮ ಮೇಲೆ ಯಾವುದಾದರೂ ದಾವೆ ಹೂಡಿರುತ್ತಾರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿದಿರುತ್ತಾರೆ.

ಸರ್ವೆ ನಂ.35/1 ರಲ್ಲಿ ನೀವು ಸ್ವಾಧೀನದಲ್ಲಿರುವುದಿಲ್ಲ ಎಂದರೆ ಸರಿ ಸಾಕ್ಷಿ ಮುಂದುವರಿದು ಸರ್ವೆ ನಂ.35/3 ರಲ್ಲಿ ಸ್ವಾಧೀನದಲ್ಲಿರುತ್ತೇವೆ ಎಂದು ನುಡಿದಿರುತ್ತಾರೆ. ನೀವು ಖರೀದಿ ಮಾಡಿರುವ ಜಾಗ ಸರ್ವೆ ನಂ.35/7 ರಲ್ಲಿ ಬರುವುದಿಲ್ಲ ಎಂದರೆ ಸರಿ. ನಿಮ್ಮ ಸ್ವತ್ತು ಸರ್ವೇ ನಂ.35/3 ರಲ್ಲಿ ಅಥವಾ ಸರ್ವೆ ನಂ.35/7 ರಲ್ಲಿ ಬರುತ್ತದೆ ಎಂದು ತಿಳಿದುಕೊಳ್ಳಲು ನ್ಯಾಯಾಲಯದಿಂದ ಅಳತೆ ಮಾಡಿಸಲು ನಿಮಗೆ ತಕರಾರು ಇದೆಯೇ ಎಂದರೆ ಸಾಕ್ಷಿ ತಕರಾರು ಇಲ್ಲ ಎಂದು ನುಡಿದಿದ್ದು, ನಂತರ ತಕರಾರು ಇದೆ ಎಂದು ನುಡಿದಿರುತ್ತಾರೆ. ನ್ಯಾಯಾಲಯದಿಂದ ಅಳತೆ ಮಾಡಿಸಲು ಕಮಿಷನರ್ ನ್ನು ನೇಮಿಸಿ ಅವರಿಂದ ನಿಮಗೆ ನೋಟೀಸ್ ಬಂದಿರುತ್ತದೆ ಎಂದರೆ ಸಾಕ್ಷಿ ಬಂದಿರುವುದಿಲ್ಲ ಎಂದು ನುಡಿದಿರುತ್ತಾರೆ. ನ್ಯಾಯಾಲಯದಿಂದ ನೇಮಕವಾದ ಕಮೀಷನರ್ ನ್ನು ಅಳತೆ ಮಾಡಲು ಬಿಡದೆ ನೀವು

ತಕರಾರು ಮಾಡಿರುತ್ತೀರಾ ಎಂದರೆ ಸರಿಯಲ್ಲ. ನಿಸಿ-8 ರ ಪ್ರಕಾರ ಕಮಿಷನರ್ ರವರು ಅವರಿಗೆ ಅಳತೆ ಮಾಡಲು ನೀವು ಹಾಗೂ ನಿಮ್ಮ ಸಂಬಂಧಿಕರು ಬಿಟ್ಟಿರುವುದಿಲ್ಲ ತಕರಾರು ಮಾಡಿರುತ್ತಾರೆಂದು ನುಡಿದಿರುತ್ತಾರೆಂದರೆ ಸಾಕ್ಷಿ ಸುಳ್ಳು ಎಂದು ನುಡಿದಿರುತ್ತಾರೆ. ಸಾಕ್ಷಿ ಮುಂದುವರಿದು ನಾನು ಹಾಗೂ ನನ್ನ ಅಕ್ಕ ಹಾಗೂ ನನ್ನ ಮಕ್ಕಳು ಇದ್ದು ನಮ್ಮ ಸಂಬಂಧಿಕರು ಯಾರೂ ಹಾಜರಿರಲಿಲ್ಲ ಎಂದು ನುಡಿದಿರುತ್ತಾರೆ. ಅಳತೆ ಮಾಡಲು ನಮ್ಮ ಸಂಬಂಧಿಕರನ್ನು ಕರೆಸುತ್ತೇವೆ ಎಂದು ನೀವು ತಕರಾರು ಮಾಡಿರುತ್ತೀರಾ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ನಾವು ಇರುವ ಸಮಯದಲ್ಲಿ ಯಾರೂ ಬಂದು ಅಳತೆಯನ್ನು ಮಾಡಿರುವುದಿಲ್ಲ ಎಂದು ನುಡಿದಿರುತ್ತಾರೆ. ನಂತರ ಪೊಲೀಸರ ಸಹಾಯದಿಂದ ಅಳತೆ ಮಾಡಬೇಕಾಗುತ್ತದೆ ಎಂದು ಕಮಿಷನರ್ ರವರು ನೀಡಿದ ವರದಿಯನ್ನು ಪರಿಗಣಿಸಿ ಪೊಲೀಸರ ಸಹಾಯದಿಂದ ಅಳತೆ ಮಾಡಲು ನ್ಯಾಯಾಲಯ ಆದೇಶ ಮಾಡಿರುತ್ತದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ.

ನ್ಯಾಯಾಲಯದ ಆದೇಶದ ನಂತರ ಪೊಲೀಸ್ ಠಾಣೆ ಯಿಂದಲೂ ನಿಮಗೆ ನೋಟೀಸ್ ಬಂದಿರುತ್ತದೆ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಪೊಲಿಸೀರ ಸಹಾಯದಿಂದ ಕಮಿಷನರ್ ರವರು ಅಳತೆ ಕಾರ್ಯವನ್ನು ಮುಗಿಸಿ ದಾವ ಸ್ವತ್ತಿನಲ್ಲಿ ಒತ್ತುವರಿ ಆಗಿರುತ್ತದೆ ಎಂದು ವರದಿ ನೀಡಿರುತ್ತಾರೆಂದರೆ ಸಾಕ್ಷಿ ಸುಳ್ಳು ಎಂದು ನುಡಿದಿರುತ್ತಾರೆ. ಸಾಕ್ಷಿ ಮುಂದುವರಿದು ನಾವು ಖರೀದಿ ಮಾಡಿದ ವರ್ಷದಿಂದಲೂ ಅದೇ ಸ್ಥಳದಲ್ಲಿ ಸ್ವಾಧೀನದಲ್ಲಿರುತ್ತೇವೆ ಎಂದು ನುಡಿದಿರುತ್ತಾರೆ, ನೀವು ಸ್ವಾಧೀನದಲ್ಲಿರುವ ಸ್ವತ್ತು ಸರ್ವೆ ನಂ35/7 ಕ್ಕೆ ಸಂಬಂಧಪಟ್ಟಿರುತ್ತದೆ ಎಂದರೆ ಸರಿಯಲ್ಲ. ನೀವು ಹಾಗೂ ತಿಮ್ಮಕ್ಕನವರು ಕಟ್ಟಿ ಕೊಂಡಿರುವ ಮನೆ ಸರ್ವೆ ನಂ.35/3 ರಲ್ಲಿ ಬರುವುದಿಲ್ಲ ಎಂದರೆ ಸರಿಯಲ್ಲ.

ಸರ್ವೆ ನಂ.35/3 ನ್ನು ಅಳತೆ ಮಾಡಿಸಿದರೆ ನೀವುಬ ಅದರಲ್ಲಿ ಸ್ವಾಧೀನದಲ್ಲಿರುವುದಿಲ್ಲ ಎಂದು ತಿಳಿದುಬರುತ್ತದೆ ಎಂದು ತಕರಾರು ಮಾಡುತ್ತಿದ್ದೀರಾ ಎಂದರೆ ಸರಿಯಲ್ಲ. ಸಾಕ್ಷಿಯು ಒಂದು ಛಾಯಚಿತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-32 ಎಂದು ಗುರುತಿಸಲಾಯಿತು. ಸಾಕ್ಷಿ ಸದರಿ ಛಾಯಚಿತ್ರವನ್ನು ನೋಡಿ ಬಲಗಡೆ ಇರುವ ಸಿಮೆಂಟ್ ಇಟ್ಟಿಗೆಯ ಮನೆಯು ನಮ್ಮದೇ ಆಗಿರುತ್ತದೆ ಮತ್ತು ಎಡಗಡೆ ಇರುವ ಮಂಗಳೂರು ಟೈಲ್ಸ್ ಮನೆಯು ನಮ್ಮ ಚಿಕ್ಕಪ್ಪನವರ ಮನೆ ಆಗಿದ್ದು, ಸಂಪೂರ್ಣ ನಾವೇ ಸ್ವಾಧೀನದಲ್ಲಿರುತ್ತೇವೆ ಎಂದು ನುಡಿದಿರುತ್ತಾರೆ. ಎರಡೂ ಮನೆ ಸೇರಿ 4 ವರೆ ಗುಂಟೆ ಇರುತ್ತದೆ ಎಂದರೆ ಸಾಕ್ಷಿ ನಮ್ಮದು 1 ಮುಕ್ಕಾಲು ಗುಂಟೆ ಇದ್ದು, ನಮ್ಮ ಚಿಕ್ಕಪ್ಪನವರದ್ದು ನನಗೆ ತಿಳಿದಿರುವುದಿಲ್ಲ ಎಂದು ನುಡಿದಿರುತ್ತಾರೆ. ವಾದಿಯು ಸದರಿ ದಾವೆಯನ್ನು ನನ್ನ ಹಾಗೂ ನನ್ನ ತಂದೆ ಹಾಗೂ ನನ್ನ ಅಜ್ಜಿಯ ಮೇಲೆ ಹೂಡಿರುತ್ತಾರೆ. ತಿಮ್ಮಕ್ಕನವರು ಸದರಿ ದಾವೆಯಲ್ಲಿ ತಕರಾರು ಸಲ್ಲಿಸಿರುವುದಿಲ್ಲ ಎಂದರೆ ಸಾಕ್ಷಿ ಅವರಿಗೆ ವಯಸ್ಸಾದ ಕಾರಣ ನಾವೇ ನಡೆಸುತ್ತಿದ್ದೇವೆ ಎಂದು ನುಡಿದಿರುತ್ತಾರೆ.

ನಿಪಿ-32 ರಲ್ಲಿ ಮಂಗಳೂರು ಹೆಂಚಿನ ಮನೆಯ ಜಾಗವು ಹೇಗೆ ಬಂದಿತ್ತು ಎಂದು ಯಾವುದೇ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸಾಕ್ಷಿ ನಮ್ಮ ಚಿಕ್ಕಪ್ಪ ಕರಾರು ಮಾಡಿಸಿಕೊಂಡಿರುವ ಪತ್ರವನ್ನು ನೀಡಿರುತ್ತೇವೆ ಎಂದು ನುಡಿದಿರುತ್ತಾರೆ. ನಮ್ಮ ಚಿಕ್ಕಪ್ಪನವರು ಗಂಗಮ್ಮನವರ ಮಕ್ಕಳಿಂದ ಕರಾರು ಮಾಡಿಸಿಕೊಂಡಿರುತ್ತಾರೆ. ಸದರಿ ಕರಾರಿನಲ್ಲಿರುವ ಚಕ್ಕುಬಂದಿ ನನಗೆ ಗೊತ್ತಿಲ್ಲ. ನಮ್ಮ ಚಿಕ್ಕಪ್ಪನಿಗೆ ಸುರೇಶ, ವೀಣ, ಯಶೋದಮ್ಮ, ಮಂಜು ಕರಾರು ಪತ್ರ ಮಾಡಿಕೊಟ್ಟಿರುತ್ತಾರೆ. ತಿಮ್ಮಕ್ಕನವರು ಎಷ್ಟು ಗುಂಟೆ ಜಮೀನನ್ನು ಖರೀದಿ ಮಾಡಿರುತ್ತಾರೆಂದರೆ ಸಾಕ್ಷಿ ಒಂದು

ಮುಕ್ಕಾಲು ಗುಂಟೆ ಖರೀದಿ ಮಾಡಿದ್ದು, ಸಾಕ್ಷಿ ಮುಂದುವರಿದು ಮಂಗಳೂರು ಹೆಂಚಿನ ಮನೆಯಲ್ಲಿ ನಾವೇ ಸ್ವಾಧೀನದಲ್ಲಿರುತ್ತೇವೆ ಎಂದು ನುಡಿದಿರುತ್ತಾರೆ. ಸಾಕ್ಷಿಯು ನಿಪಿ-7 ಛಾಯಚಿತ್ರವನ್ನು ನೋಡಿ ಅದರಲ್ಲಿ ತಮ್ಮ ಮನೆಯನ್ನು ಗುರುತಿಸಿರುತ್ತಾರೆ. ನಿಪಿ-7 ರಲ್ಲಿ ಗೋಡೆ ಪಕ್ಕ ಇರುವ ಖಾಲಿ ಜಾಗ 10 ಇಂಟು 70 ಅಡಿ ನಮಗೆ ಸೇರಿದ ಸ್ವತ್ತಾಗಿರುತ್ತದೆ. ನಿಪಿ-7 ರಲ್ಲಿ ಹೊಸದಾಗಿ ನಿರ್ಮಾಣ ಮಾಡುತ್ತಿರುವುದು ನಮ್ಮ ನೀರಿನ ತೊಟ್ಟಿ ಆಗಿರುತ್ತದೆ. ನ್ಯಾಯಾಲಯದಲ್ಲಿ ಯಥಾ ಸ್ಥಿತಿ ಕಾಪಾಡಬೇಕೆಂದು ಆದೇಶ ಆಗಿರುತ್ತದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ನಿಪಿ-32 ರಲ್ಲಿ ನಾಲ್ಕು ದಿನಗಳಿಂದ ಸಿಮೆಂಟ್ ಗೋಡೆಯನ್ನು ಕಟ್ಟುತ್ತಿದ್ದೇವೆ ಸಾಕ್ಷಿ ಮುಂದುವರಿದು ಮನೆ ಸೋರುತ್ತಿರುವ ಕಾರಣ ಕಟ್ಟುತ್ತಿದ್ದೇವೆ ಎಂದು ನುಡಿದಿರುತ್ತಾರೆ. ಮನೆಯಜನ್ನು ರಿನೋವೇಷನ್ ಮಾಡಿಸಲು ಅಗತ್ಯ ಅಧಿಕಾರಿಗಳಿಂದ ಅನುಮತಿಯನ್ನು ಪಡೆದಿರುತ್ತಿರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿದಿರುತ್ತಾರೆ.

ಸ್ಥಳೀಯ ಸಂಸ್ಥೆಯಿಂದ ಲೈಸನ್ಸನ್ನು ಪಡೆದಿರುತ್ತಿರಾ ಎಂದರೆ ಸ ಾಕ್ಷಿ ನನ್ನ ತಂದೆಯವರು ಮನೆಯನ್ನು ಕಟ್ಟಿರುವುದರಿಂದ ನನಗೆ ಅದರ ಬಗ್ಗೆ ಮಾಹಿತಿ ಇಲ್ಲ ಎಂದು ನುಡಿದಿರುತ್ತಾರೆ. ನಿಪಿ-32 ರಲ್ಲಿರುವ ಮನೆಗಳು ಸರ್ವೆ ನಂ.35/7 ರಲ್ಲಿ ಬರುತ್ತದೆ, 35/3 ರಲ್ಲಿ ಬರುವುದಿಲ್ಲ ಎಂದರೆ ಸಾಕ್ಷಿ ಸರ್ವೆ ನಂ.35/3 ರಲ್ಲೇ ಬರುತ್ತದೆ ಎಂದು ನುಡಿದಿರುತ್ತಾರೆ, ನೀವು ಸರ್ವೇ ನಂ.35/3 ರಲ್ಲಿ ಬರುತ್ತದೆ ಎಂದು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದಿರಾ ಎಂದರೆ ಸರಿಯಲ್ಲ. ಸರ್ವೆ ನಂ.35/3 ನ್ನು ನ್ಯಾಯಾಲಯದಿಂದ ಅಳತೆ ಮಾಡಿಸಲು ನಿಮಗೆ ಯಾವುದೇ ತೊಂದರೆ ಇಲ್ಲ ಎಂದರೆ ಸಾಕ್ಷಿ ನನಗೆ ತಕರಾರು ಇದೆ ಎಂದು ನುಡಿದಿರುತ್ತಾರೆ. ಸರ್ವೆ ನಂ.35/3 ನ್ನು ಅಳತೆ ಮಾಡಿಸಿದರೆ ಒತ್ತುವರಿ ಆಗಿರುವುದು

ತಿಳಿದುಬಂದಿರುತ್ತದೆ ಎಂದು ನೀವು ತಕರಾರು ಇದೆ ಎಂದು ನುಡಿಯುತ್ತಿದ್ದಿರಾ ಎಂದರೆ ಸರಿಯಲ್ಲ. ಸರ್ವೆ ನಂ.35/7 ರಲ್ಲಿ ನಾವು ಯಾವುದೇ ಒತ್ತುವರಿ ಮಾಡಿರುವುದಿಲ್ಲ, ನನ್ನ ತಂದೆ ಕ್ರಯಕ್ಕೆ ಕೊಂಡ ಸ್ವತ್ತಿನಲ್ಲಿ ನಾವು ಸ್ವಾಧೀನದಲ್ಲಿರುತ್ತೇವೆ. ಸರ್ವೆ ನಂ.35/7 ರಲ್ಲಿ ನಿಮ್ಮ ತಂದೆಯವರು ಯಾವುದೇ ಸ್ವತ್ತನ್ನು ಕ್ರಯಕ್ಕೆ ಕೊಂಡಿರುವುದಿಲ್ಲ ಎಂದರೆ ಸಾಕ್ಷಿ ಸರ್ವೇ ನಂ.3/3 ರಲ್ಲಿ ಕೊಂಡಿರುತ್ತಾರೆಂದು ನುಡಿದಿರುತ್ತಾರೆ. ನಿಪಿ-32 ರಲ್ಲಿರುವ ಮನೆಗಳಿಗೆ ಕಂದಾಯ ಕಟ್ಟುತ್ತಿದ್ದಿರಾ ಎಂದರೆ ಸಾಕ್ಷಿ ಕೈ ಬರಹದ ಪಹಣಿಗಳಿಗೆ ಕಟ್ಟುತ್ತಿದ್ದು, ಕಂಪ್ಯೂಟರೀಕೃತ ಪಹಣಿ ಆದ ಮೇಲೆ ಸರ್ವೆ ನಂಬರ್ ತಪ್ಪಾಗಿರುವ ಕಾರಣ ನಾವು ಕಟ್ಟಿರುವುದಿಲ್ಲ ಎಂದು ನುಡಿದಿರುತ್ತಾರೆ. ಪಹಣಿಯಲ್ಲಿ ಮನೆಗಳು ಇರುವ ಬಗ್ಗೆ ನಮೂದು ಇದೆಯೇ ಎಂದರೆ ಸಾಕ್ಷಿ ಅದರ ಬಗ್ಗೆ ಮಾಹಿತಿ ಇಲ್ಲ ಎಂದು ನುಡಿದಿರುತ್ತಾರೆ. ಪಹಣಿಯಲ್ಲಿ ಮನೆಗಳು ಇರುವ ಬಗ್ಗೆ ನಮೂದು ಮಾಡಿಸಲು ಪ್ರಯತ್ನಪಟ್ಟಿರುತ್ತಿರಾ ಎಂದರೆ ಸಾಕ್ಷಿ ಪ್ರಯತ್ನಪಟ್ಟಿರುತ್ತೇವೆ ಎಂದು ನುಡಿದಿರುತ್ತಾರೆ. ನಿಪಿ-32 ರ ಮನೆಯ ಸುತ್ತಮುತ್ತಲೂ ಬೇರೆಯವರು ಮನೆಗಳನ್ನು ಕಟ್ಟಿಕೊಂಡಿರುತ್ತಾರೆಂದರೆ ಸಾಕ್ಷಿ ನನಗೆ ಮಾಹಿತಿ ಇಲ್ಲ ಎಂದು ನುಡಿದಿರುತ್ತಾರೆ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಕೇ. ಸ. ಇ. ಎ. ಒ.

Sd/-
1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
**ಪ್ರ.ದ.ನ್ಯಾ.ದಂ.ರವರು,ತರೀಕೆರೆ.**